ಕರ್ನಾಟಕ ಸಾಹಿತ್ಯ ಅಕಾಡೆಮಿ

ಕರ್ನಾಟಕ ಸರ್ಕಾರ

# ಕರ್ನಾಟಕ ಸಾಹಿತ್ಯ ಅಕಾಡೆಮಿ
# Karnataka Sahithya Academy

ಕನ್ನಡ ಭವನ, ೨ನೇ ಮಹಡಿ, ಜೆ.ಸಿ.ರಸ್ತೆ,
ಬೆಂಗಳೂರು – ೫೬೦ ೦೦೨.
ದೂರವಾಣಿ : ೦೮೦-೨೨೨೧ ೧೭೩೦
೨೨೧೦ ೬೪೬೦
ಅಂತರಜಾಲ : www.karnatakasahithyaacademy.org
ಇ-ಅಂಚೆ : sahithya.academy@gmail.com

ಕಸಾಅ/58/ಗೋ.ಅ.ಜ.ಶ/ವಿ.ಸಂ./2020-21 ದಿನಾಂಕ:09.02.2021

## ಸೂಚನಾ ಫಲಕಕ್ಕೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯು 2021ರ ಮಾರ್ಚ್ ತಿಂಗಳಲ್ಲಿ ಎಂ.ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ನೆನಪಿಗಾಗಿ 'ಗೋಪಾಲಕೃಷ್ಣ ಅಡಿಗ ಮತ್ತು ಕನ್ನಡ ಸಾಹಿತ್ಯ' ಎಂಬ ವಿಷಯದಡಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದೆ. ಈ ವಿಚಾರ ಸಂಕಿರಣದಲ್ಲಿ ಪರ್ಯಾಯ ಗೋಷ್ಠಿಗಳು ನಡೆಯಲಿವೆ. ವಿಚಾರಸಂಕಿರಣದಲ್ಲಿ ಭಾಗವಹಿಸುವವರು ಅರ್ಜಿ ಸಲ್ಲಿಸಬೇಕು ಮತ್ತು ಪರ್ಯಾಯ ಗೋಷ್ಠಿಯಲ್ಲಿ ಅಡಿಗರ ಸಾಹಿತ್ಯ ಕುರಿತಾಗಿ ಪ್ರಬಂಧ ಮಂಡಿಸುವವರು ಅರ್ಜಿಯೊಂದಿಗೆ ಪ್ರಬಂಧವನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ:25.02.2021ರ ಒಳಗೆ ಅಕಾಡೆಮಿಗೆ ರಿಜಿಸ್ಟರ್ ಅಂಚೆ ಅಥವಾ ಕೊರಿಯರ್ ಮೂಲಕ ಈ ಕೆಳಕಂಡ ನಿಬಂಧನೆಗೊಳಪಟ್ಟು ಅರ್ಜಿ ಮತ್ತು ಪ್ರಬಂಧಗಳನ್ನು ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ ಅನ್ನು www.karnatakasahithyaacademy.org ಸಂಪರ್ಕಿಸಬಹುದಾಗಿದೆ.

(ಕರಿಯಪ್ಪ ಎನ್.)
ರಿಜಿಸ್ಟ್ರಾರ್

**ನಿಬಂಧನೆಗಳು:**

- ಪ್ರಬಂಧಗಳು ಅಡಿಗರ ಕಾವ್ಯ, ಗದ್ಯ ಸಾಹಿತ್ಯ, ಅನುವಾದ, ಕನ್ನಡ ಸಾಹಿತ್ಯಕ್ಕೆ ಅಡಿಗರ ಕೊಡುಗೆ, ನವ್ಯ ಸಾಹಿತ್ಯ ಮತ್ತು ಅಡಿಗರು ಹೀಗೆ ಅಡಿಗರ ಸಾಹಿತ್ಯ ಕುರಿತವುಗಳಾಗಿರಬೇಕು.
- ನಿಮ್ಮ ಆಯ್ಕೆಯ ಅಡಿಗರ ಯಾವುದಾದರು ಒಂದು ಕವಿತೆಯ ಮೇಲೆ ಪ್ರಾಯೋಗಿಕ ವಿಮರ್ಶೆ ಮಾಡಿ ಪ್ರಬಂಧವನ್ನು ಕಳುಹಿಸಬಹುದು.
- ಪ್ರಬಂಧವನ್ನು ಕಳುಹಿಸುವವರು ಕಡ್ಡಾಯವಾಗಿ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ ನಮೂದಿಸಬೇಕು.
- ಪ್ರಬಂಧವು 5 ಪುಟಗಳನ್ನು ಮೀರಿರಬಾರದು.
- ವಯಸ್ಸಿನ ನಿರ್ಬಂಧ ಇರುವುದಿಲ್ಲ.
- ಪ್ರಬಂಧಗಳು ನುಡಿ ತಂತ್ರಾಂಶ 4.0ದಲ್ಲಿರಬೇಕು ಮತ್ತು ಫಾಂಟ್ ಸೈಜ್ 12ಇರಬೇಕು.
- ಅರ್ಹ ಪ್ರಬಂಧಗಳನ್ನು ಆಯ್ಕೆ ಮಾಡುವಲ್ಲಿ ಅಕಾಡೆಮಿಯ ತೀರ್ಮಾನವೇ ಅಂತಿಮ.
- ಪ್ರಬಂಧಗಳನ್ನು ಕಳುಹಿಸಲು ಕೊನೆಯ ದಿನಾಂಕ: 25.02.2021.

ಪ್ರಬಂಧಗಳನ್ನು ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ / ರಿಜಿಸ್ಟರ್ ಅಂಚೆ / ಕೊರಿಯರ್ ಮೂಲಕ ಕಳುಹಿಸಬೇಕು.

ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಎರಡನೇ ಮಹಡಿ, ಕನ್ನಡ ಭವನ,
ಜೆ.ಸಿ.ರಸ್ತೆ, ಬೆಂಗಳೂರು-560 002.
ದೂ: 080-22211730 / 22106460
sahithya.academy@gmail.com